

ರಾಷ್ಟ್ರೀಯ ಯುವ ದಿನಾಚರಣೆ, ಪುಣೆ ಆಶ್ರಮ




# ರಾಮಕೃಷ್ಣ ಮಹಾಸಂಘದ ಇತ್ತೀಚಿನ ಚಟುವಟಿಕೆಗಳು

**ರಾಷ್ಟ್ರೀಯ ಯುವ ದಿನಾಚರಣೆ ಮತ್ತು ಆಜಾದೀ ಕಾ ಅಮೃತ್ ಮಹೋತ್ಸವ್:** ಸ್ವಾಮಿ ವಿವೇಕಾನಂದರ ಜನ್ಮದಿನವಾದ (ರೋಮನ್ ಕ್ಯಾಲೆಂಡರ್ ಪ್ರಕಾರ) ಜನವರಿ ೧೨ರಂದು ರಾಷ್ಟ್ರೀಯ ಯುವ ದಿನಾಚರಣೆಯನ್ನು ಭಾರತದ ಸ್ವಾತಂತ್ರ್ಯದ ೭೫ನೇ ಆಚರಣೆ 'ಆಜಾದೀ ಕಾ ಅಮೃತ್ ಮಹೋತ್ಸವ್'ದ ಅಂಗವಾಗಿ ವಿಭಿನ್ನ ರೀತಿಯಲ್ಲಿ ಆಚರಿಸಲಾಯಿತು. ಬೇಲೂರು ಮಠ ಹಾಗೂ ಇತರ ಎಲ್ಲ ಶಾಖಾಕೇಂದ್ರಗಳಲ್ಲಿ ಕೋವಿಡ್ ೧೯ ಹಿನ್ನೆಲೆಯಲ್ಲಿ ವಿವಿಧ ಸುರಕ್ಷತಾ ನಿಯಮಾವಳಿಗಳೊಂದಿಗೆ ಆನ್‌ಲೈನ್ ಹಾಗೂ ನೇರ ಕಾರ್ಯಕ್ರಮಗಳ ಮೂಲಕ ಇವನ್ನು ಆಚರಿಸಲಾಯಿತು. ೩೦ರಷ್ಟು ವಿದೇಶೀ ಕೇಂದ್ರಗಳಲ್ಲೂ ಈ ಕಾರ್ಯಕ್ರಮಗಳು ನಡೆದವು.

**ಸ್ವಾಮಿ ವಿವೇಕಾನಂದರ ಜಯಂತಿ:** ಕೋವಿಡ್-೧೯ ಮೂರನೇ ಅಲೆಯ ಹಿನ್ನೆಲೆಯಲ್ಲಿ ಜನವರಿ ೧ ರಿಂದ ಬೇಲೂರು ಮಠವು ಸಾರ್ವಜನಿಕರಿಗಾಗಿ ಮುಚ್ಚಿದ್ದರೂ, ಜನವರಿ ೨೫ ರಂದು **ಸ್ವಾಮಿ ವಿವೇಕಾನಂದರ ಜಯಂತಿಯನ್ನು** ವಿಶೇಷ ಪೂಜೆ, ಹೋಮ, ಭಜನೆ ಇತ್ಯಾದಿಗಳೊಂದಿಗೆ ನಡೆಸಲಾಯಿತು. ಇತರ ಶಾಖಾ ಕೇಂದ್ರಗಳಲ್ಲೂ ಜಯಂತಿಯನ್ನು ಕೋವಿಡ್ ಮುನ್ನೆಚ್ಚರಿಕೆ ಗಳೊಂದಿಗೆ ನಡೆಸಲಾಯಿತು. ಬಹುತೇಕ ಕೇಂದ್ರಗಳಲ್ಲಿ ಕಾರ್ಯ ಕ್ರಮಗಳನ್ನು ಅಂತರ್ಜಾಲ ಮೂಲಕ ನೇರ ಪ್ರಸಾರ ಮಾಡ ಲಾಗಿತ್ತು .

**ಹೊಸ ಶಾಖಾಕೇಂದ್ರ :** ಬ್ರೆಝಿಲ್ ದೇಶದ **ರಿಯೋ ಡಿ ಜನೇರಿಯೋ**ದಲ್ಲಿ ರಾಮಕೃಷ್ಣ ವೇದಾಂತ ಸೆಂಟರ್ ಆರಂಭ ವಾಯಿತು. ಇಲ್ಲಿಯತನಕ ಬ್ರೆಝಿಲ್‌ನ ಸಾವೋ ಪಾಲೋ ಕೇಂದ್ರದ ಉಪ-ಕೇಂದ್ರವಾಗಿದ್ದ ಈ ಸೆಂಟರ್, ಈಗ ಸ್ವತಂತ್ರ ಶಾಖಾಕೇಂದ್ರವಾಗಿ ಪರಿವರ್ತಿತವಾಗಿದೆ.

## ಶಾಖಾಕೇಂದ್ರಗಳ ಚಟುವಟಿಕೆಗಳು

**ಭಾರತ:** **ವಡೋದರ** ಕೇಂದ್ರದಲ್ಲಿ ಜನವರಿ ೭ ಹಾಗೂ ೮ರಂದು ಆಸ್ಪತ್ರೆ ಹಾಗೂ ಸಾಧುನಿವಾಸವನ್ನು ಒಳಗೊಂಡಿರುವ **'ಸ್ವಾಮಿ ಆತ್ಮಸ್ಥಾನಂದ ಭವನ'**ವನ್ನು ಸ್ವಾಮಿ ಗೌತಮಾನಂದಜಿ ಯವರು ಉದ್ಘಾಟಿಸಿದರು.

**ಮಾನಸದ್ವೀಪ** ಕೇಂದ್ರವು ಗಂಗಾಸಾಗರ ಮೇಳದ ಸಂದರ್ಭ ದಲ್ಲಿ ಜನವರಿ ೧೨ ರಿಂದ ೧೬ರ ವರೆಗೆ ೨೪೬ ಯಾತ್ರಿಕರಿಗೆ ವಸತಿ ಹಾಗೂ ಆಹಾರವನ್ನು ಒದಗಿಸಿತು.

**ನರೇಂದ್ರಪುರ** ಕೇಂದ್ರದ ಕಾಲೇಜಿಗೆ NAACನ A+ ದರ್ಜೆಯು ಮುಂದಿನ ೫ ವರ್ಷಗಳಿಗೆ ಲಭಿಸಿದೆ.

## ಮೌಲ್ಯ ಶಿಕ್ಷಣ ಮತ್ತು ಯುವ ಸಮ್ಮೇಳನ

**ದೆಹಲಿ** ಕೇಂದ್ರವು ೨೦೨೧ರ ಅಕ್ಟೋಬರ್ ೨೮ ರಿಂದ ಡಿಸೆಂಬರ್ ೧೭ರ ತನಕ ಮೌಲ್ಯಶಿಕ್ಷಣ ತರಬೇತಿಯನ್ನು ಆನ್‌ಲೈನ್ ಮೂಲಕವೂ, ೨೦೨೨ರ ಜನವರಿ ೫-೬ರಂದು ತಮಿಳು ನಾಡಿನ ನೈವೇಲಿಯಲ್ಲಿ ಆಫ್‌ಲೈನ್‌ನಲ್ಲಿಯೂ ನಡೆಸಿತು.

**ರಾಂಚಿ ಮೊರಬಾದಿ** ಆಶ್ರಮವು ಡಿಸೆಂಬರ್ ೨೭ರಿಂದ ೨೯ರ ವರೆಗೆ ನಡೆಸಿದ ೩ ದಿನಗಳ ವ್ಯಕ್ತಿತ್ವ ವಿಕಸನ ಶಿಬಿರದಲ್ಲಿ ೨೮ ಮಂದಿ ವಿದ್ಯಾರ್ಥಿನಿಯರು ಹಾಗೂ ೧೮ ಮಂದಿ ಶಿಕ್ಷಕರೂ ಭಾಗವಸಿದ್ದರು.

## ನೇತ್ರ ಚಿಕಿತ್ಸೆ ಹಾಗೂ ಇತರ ವೈದ್ಯಕೀಯ ಶಿಬಿರಗಳು

ಹಿಂದುಳಿದವರಿಗೆ ಹಾಗೂ ಬಡಜನರಿಗೆ ನೇತ್ರ ಚಿಕಿತ್ಸೆ ಶಿಬಿರ ಹಾಗೂ ವೈದ್ಯಕೀಯ ಶಿಬಿರಗಳನ್ನು ವಿವಿಧ ಶಾಖಾಕೇಂದ್ರಗಳು ನಡೆಸಿವೆ. ಆಲೋ, ದೆಹಲಿ, ಜೆಮ್‌ಶೆಡ್‌ಪುರ್, ಕಾಮಾರ ಪುಕುರ, ಖೇತ್ರಿ , ಮೇದಿನೀಪುರ, ನಾಗಪುರ, ನೌರಾ, ರಾಂಚಿ ಮೊರಬಾದಿ, ಸೇಲಂ, ತಂಜಾವೂರು, ವಡೋದರ – ಈ ಕೇಂದ್ರಗಳಲ್ಲಿ ಶಿಬಿರಗಳು ನಡೆದವು.


ನೇತ್ರ ಚಿಕಿತ್ಸಾ ಶಿಬಿರ, ಖೇತ್ರಿ

Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020